ಉಪಾಧ್ಯಕ್ಷರು :— ಎಲ್ಲರಿಗೂ ಆ ರೀತಿ ಅವಕಾಶ ಹೇಗೆ ಕೊಡುವುದಕ್ಕೆ ಆಗುತ್ತದೆ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಇಲ್ಲಿರುವಂತಹ ಯಾರಾದರೂ ಹಿರಿಯ ಸದಸ್ಯರುಗಳು ನನ್ನ ರಕ್ಷಣೆಗೆ ಬರಬೇಕು.

ಉಪಾಧ್ಯಕ್ಷರು :— ತಾವು ಕುಳಿತುಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಹೇಗೆ ಕುಳಿತುಕೊಳ್ಳುವುದು. ನಿಯಮದಲ್ಲಿಯೆ ಇದೆ, ಪ್ರಶ್ನೋತ್ತರವಾದ ತಕ್ಷಣ..

ಶ್ರೀ ಜಿ.ಎಸ್. ಶಿವನಂಜಪ್ಪ :— ಮಾನ್ಯ ಉಪಾಧ್ಯಕ್ಷರೆ, ನಾನು ಇದಕ್ಕೆ ಸಹಿ ಹಾಕಿದ್ದೇನೆ. ನಮ್ಮ ತೊಂದರೆಗಳು ಏನು? ಇದು ಅಡ್ಮಿಸಿಬಿಲಿಟಿಗೆ ಬರುತ್ತದೆಯೋ, ಇಲ್ಲವೋ ಎಂಬುದಾದರೂ ಕನ್ವಿನ್ಸ್ ಮಾಡಬೇಕಲ್ಲಾ, ನಾವು ಹೇಳಿದ ಮೇಲೆ ತಾವು ಆ ತೀರ್ಮಾನಕ್ಕೆ ಬರುವುದಾದರೆ ಅದಕ್ಕೆ ನಾವು ಬದ್ಧವಾಗಿರುತ್ತೇವೆ. ನಾವು ಚೇರ್ ಗೆ ಪ್ರಶ್ನೆ ಮಾಡುತ್ತಿಲ್ಲ. ನಾವು ಎಲ್ಲಾ ಗೌರವವನ್ನು ಕೊಡುತ್ತಾ ಬಂದಿದ್ದೇವೆ. ಈಗಲೂ ಕೊಡುತ್ತಲೇ ಬಂದಿದ್ದೇವೆ.

ಉಪಾಧ್ಯಕ್ಷರು :— ಈಗ ಪ್ರಿಲಿಮಿನರಿ ಪ್ರಶ್ನೆಯನ್ನು ಅಡಿಟ್ ಮಾಡುವುದಿಲ್ಲ, ಅದರ ತೀರ್ಮಾನ ಚೇರಿಗೆ ಬಿಟ್ಟಿರುವಂಥಾದ್ದು, ನಾನು ಅಡಿಟ್ ಮಾಡಿಲ್ಲ, ತಾವು ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಪುಟ್ಟಣಯ್ಯ :— ಮಾನ್ಯ ಉಪಾಧ್ಯಕ್ಷರೆ, ಆ ನಿಲುವಳಿ ಸೂಚನೆಯನ್ನು ಶೂನ್ಯವೇಳೆಗೆ ಕನ್ವರ್ಟ್ ಮಾಡಿದ್ದಾರೆ. ದಯವಿಟ್ಟು ಅವಕಾಶ ಮಾಡಿಕೊಡಿ.

ಶ್ರೀ ಕೆ.ಸಿ. ಮಾಧುಸ್ವಾಮಿ :— ಮಾನ್ಯ ಉಪಾಧ್ಯಕ್ಷರೆ, ತಾವು ದಯಮಾಡಿ ನನಗೆ ಅವಕಾಶ ಕೊಡಿ. ಇದು ಗಂಭೀರವಾದಂತಹ ವಿಚಾರ.

ಉಪಾಧ್ಯಕ್ಷರು :— ಮಾನ್ಯ ಮುದ್ದಹನುಮೇಗೌಡರೆ, ತಾವು ಮಾತನಾಡುವುದಿಲ್ಲವೆಂದರೆ ಬೇರೆ ಸದಸ್ಯರನ್ನು ಮಾತನಾಡಲು ಕರೆಯುತ್ತೇನೆ.

(ಅ) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ರಾಜ್ಯದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಹಿಂದಿ ಶಿಕ್ಷಕರ ಕೊರತೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) :— ಮಾನ್ಯ ಉಪಾಧ್ಯಕ್ಷರೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನಕ್ಕೆ ಒಂದು ವಿಷಯವನ್ನು ತರಲಿಚ್ಛಿಸುತ್ತೇನೆ. ರಾಜ್ಯದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಹಿಂದಿ ಶಿಕ್ಷಕರ ಕೊರತೆ ಇರುವಂಥಾದ್ದು ಒಂದು ಸಮಸ್ಯೆಯಾಗಿದೆ. ಇವತ್ತು 7ನೇ ತರಗತಿಗೆ ಹಿಂದಿಗೆ 100 ಅಂಕಗಳನ್ನು ನಿಗದಿ ಮಾಡಿದ್ದಾರೆ. ಆದರೆ ಯಾವುದೇ ಶಾಲೆಗಳಲ್ಲೂ ಹಿಂದಿ ಶಿಕ್ಷಕರು ಇಲ್ಲ. ಇವತ್ತು ಹಿಂದಿಯನ್ನು ಕಡ್ಡಾಯವೆಂದು ಮಾಡಿ 100 ಅಂಕಗಳನ್ನು ಇಟ್ಟಿದ್ದಾರೆ. ಆದುದರಿಂದ ನಾನು ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ ಇವತ್ತು ರಾಜ್ಯದಲ್ಲಿ

ಅನೇಕ ಹಿಂದಿ ಪದವೀಧರರು ಇದ್ದಾರೆ. ಅವರನ್ನು ಜಿಲ್ಲಾ ಮಟ್ಟದಲ್ಲಿ ಪ್ರಾಥಮಿಕ ಶಾಲೆಗಳಿಗೆ ಶಿಕ್ಷಕರನ್ನು ನೇಮಕ ಮಾಡುತ್ತಿರಿ, ಇವರ ಸಮಾನಾಂತರವಾಗಿ ಈ ಹಿಂದಿ ಪದವೀಧರರನ್ನೂ ಕೂಡ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಕೆಲಸ ಮಾಡಲು ತಯಾರಾಗಿದ್ದಾರೆ. ಆದುದರಿಂದ ದಯಮಾಡಿ ತಾವು ಇವತ್ತು ರಾಜ್ಯದಲ್ಲಿರುವಂತಹ ಈ ನಿರುದ್ಯೋಗಿ ಹಿಂದಿ ಪದವೀಧರರು ಯಾರಿದ್ದಾರೆ, ಅವರನ್ನು ಜಿಲ್ಲಾಮಟ್ಟದ ಶಿಕ್ಷಕರನ್ನಾಗಿ ನೇಮಕ ಮಾಡುವ ಮೂಲಕ ಇವತ್ತು ರಾಜ್ಯದಲ್ಲಿ ಸಮಸ್ಯೆಯಾಗಿರುವಂತಹ ಹಿಂದಿ ಶಿಕ್ಷಕರನ್ನು ನೇಮಕ ಮಾಡುವಂತಹ ಕೆಲಸವನ್ನು ಮಾನ್ಯ ಶಿಕ್ಷಣ ಸಚಿವರು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ :— ಮಾನ್ಯ ಉಪಾಧ್ಯಕ್ಷರೆ, ಪ್ರಾಥಮಿಕ ಶಾಲೆಗಳಿಗೆ ಟಿ.ಸಿ.ಹೆಚ್. ಮಾಡಿದ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಅವಕಾಶವಿತ್ತು. ಇಲ್ಲಿ ಇಂಗ್ಲೀಷ್, ಕನ್ನಡ, ವಿಜ್ಞಾನ, ಸಮಾಜ, ಪಾಠಗಳು ಹಾಗೂ ಹಿಂದಿ ಮುಂತಾದ ಎಲ್ಲಾ ವಿಷಯಗಳನ್ನು ಎಲ್ಲಾ ಶಿಕ್ಷಕರು ಬೋಧನೆ ಮಾಡಬೇಕು. ಇಲ್ಲಿ ಪ್ರತ್ಯೇಕವಾಗಿ ಶಿಕ್ಷಕರು ಇರುವುದಿಲ್ಲ. ಪ್ರೌಢಶಾಲೆಗಳಲ್ಲಿ ಮಾತ್ರ ಹಿಂದಿಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಅವಕಾಶವಿದೆ. ಆದರೆ ಈ ರೀತಿಯಾಗಿ ಪ್ರಾಥಮಿಕ ಶಾಲೆಗಳಿಗೆ ನೇಮಕ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.

(ಅ) ಸೂರತ್ಕಲ್ ಕ್ಷೇತ್ರದ ಪಿಲಿಕಳ ನಿಸರ್ಗಧಾಮ.

ಶ್ರೀ ಕುಂಭಿ ಸುಂದರರಾವ್ (ಸೂರತ್ಕಲ್) :— ಮಾನ್ಯ ಉಪಾಧ್ಯಕ್ಷರೆ, ಮಂಗಳೂರು ತಾಲ್ಲೂಕಿನ ಸೂರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿ ಪಿಲಿಕಳ ಎಂದು ಒಂದು ನಿಸರ್ಗಧಾಮವಿದೆ. ಇದು ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದುತ್ತಾ ಇದೆ. ಇದಕ್ಕೆ ಕೇಂದ್ರ ಸರ್ಕಾರದಿಂದ ಕೋಟ್ಯಾಂತರ ರೂಪಾಯಿಗಳ ಅನುದಾನ ಅಲ್ಲಿಗೆ ಬರುತ್ತಿದೆ. ಈ ಸ್ಥಳ ಜಿಲ್ಲೆಯ ಒಂದು ಪ್ರಸಿದ್ಧವಾದಂತಹ ಸ್ಥಳವಾಗುವ ಎಲ್ಲಾ ಲಕ್ಷಣಗಳನ್ನು ಹೊಂದಿದೆ. ಇದುವರೆಗೂ ದಕ್ಷಿಣ ಕನ್ನಡ ಜಿಲ್ಲೆಗೆ ಬಂದವರು ಪುಣ್ಯ ಕ್ಷೇತ್ರಗಳನ್ನು ಸಂದರ್ಶನ ಮಾಡುತ್ತಿದ್ದರು. ಈಗ ಪಿಲಿಕುಳ ನಿಸರ್ಗಧಾಮವನ್ನು ಸಂದರ್ಶಿಸುವಂತಹ ಅವಕಾಶ ಉಂಟಾಗಿದೆ. ಈ ಪಿಲಿಕುಳದ ಬಗ್ಗೆ ದಕ್ಷಿಣ ಕನ್ನಡ ಜನರ ಅಪೇಕ್ಷೆ ಏನು ಎಂದರೆ ಡಾ: ಶಿವರಾಮಕಾರಂತರವರು ದಿವಂಗತರಾಗಿದ್ದು, ಅವರು ಜ್ಞಾನಪೀಠ ವಿಜೇತರು ಮತ್ತು ಕರ್ನಾಟಕ ರಾಜ್ಯದ ಪ್ರಸಿದ್ಧ ಸಾಹಿತಿಗಳು ಆಗಿದ್ದರು. ಅವರ ಹೆಸರನ್ನು ಈ ಪಿಲಿಕುಳಕ್ಕೆ ಇಡಬೇಕೆಂದು ಜನರ ಅಪೇಕ್ಷೆ ಇದೆ. ಈ ಪಿಲಿಕುಳ ಎನ್ನುವ ಹೆಸರು ಏನು ಹೇಳುತ್ತದೆಂದರೆ ಪಿಲಿ ಎಂದರೆ ಹುಲಿ, ಕುಳ ಎಂದರೆ ಕೂಳ ಅಲ್ಲಿ ಹುಲಿ ನೀರು ಕುಡಿಯಲು ಕೆರೆಗೆ ಬರುತ್ತಿತ್ತು ಎಂದು ಈ ಹೆಸರನ್ನು ಇಟ್ಟಿದ್ದಾರೆ. ಈಗ ಹುಲಿಗಳ ಸಂತತಿಯು ಇಲ್ಲ. ಅವು ನನ್ನ ಹೆಸರನ್ನು ಏಕೆ ತೆಗೆದರು ಎಂದು ಕೋರ್ಟಿಗೂ ಹೋಗುವ ಹಾಗೆ ಇಲ್ಲ. ಡಾ: ಶಿವರಾಮಕಾರಂತರ ಹೆಸರನ್ನು ಇಟ್ಟರೆ ಅದು ಸಮರ್ಪಕವಾಗುತ್ತದೆ, ಮತ್ತೆ ಎಲ್ಲರಿಗೂ ಒಪ್ಪಿಗೆಯಾಗುತ್ತದೆ. ಆದುದರಿಂದ ಸರ್ಕಾರ ಇಲ್ಲಿ ಪಿಲಿಕುಳ ಎನ್ನುವ ಹೆಸರನ್ನು ತೆಗೆದು ಡಾ: ಶಿವರಾಮ ಕಾರಂತರ ಹೆಸರನ್ನು ಇಡಬೇಕೆಂದು ಕೇಳಿಕೊಳ್ಳುತ್ತೇನೆ.